## Vijaya Vaani

Date: 01-04-2022 | Page No: 7A

Edition: Mysore | Language: Kannada

# ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳಿ

ವಿಜಯವಾಣಿ ಚಿತ್ರ




**ಎಸ್‌ಡಿಎಂ ಐಎಂಡಿ ಕಾಲೇಜಿನಲ್ಲಿ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಡಾ.ಡಿ.ವಿರೇಂದ್ರ ಹೆಗ್ಗಡೆ, ಪಂಕಜಮ್ ಶ್ರೀದೇವಿ, ಡಾ. ಎಂ.ವಿ ಸುನೀಲ್, ಡಾ. ಎನ್.ಆರ್. ಪರಶುರಾಮನ್, ಕಮಲ್ ಬಾಲಿ, ವಿಜು ಪರಮೇಶ್ವರ, ನಿಶಿತ್ ಜೈನ್, ಡಾ. ಭೀಮರಾಯ ಮೇತ್ರಿ, ಡಾ.ಇಂದಿರಾ, ಪವನ್ ಜಿ.ರಂಗ ಮತ್ತಿತರರು ಹಾಜರಿದ್ದರು.**

■ ವಿಜಯವಾಣಿ ಸುದ್ದಿಜಾಲ ಮೈಸೂರು

ನಗರದ ಚಾಮುಂಡಿ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಕಾಲೇಜಿನಲ್ಲಿ 27ನೇ ವಾರ್ಷಿಕ ಘಟಿಕೋತ್ಸವ ಗುರುವಾರ ಸಂಜೆ ನಡೆಯಿತು.

2020-2022ನೇ ಬ್ಯಾಚ್‌ನ 177 ಅರ್ಹ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಡಿಪ್ಲೊಮಾ ಮ್ಯಾನೇಜ್‌ಮೆಂಟ್ ಪದವಿಯನ್ನು ಎಸ್‌ಡಿಎಂಐಎಂಡಿನ ಅಧ್ಯಕ್ಷ ಡಾ.ಡಿ.ವೀರೇಂದ್ರ ಹೆಗ್ಗಡೆ ಪ್ರದಾನ ಮಾಡಿದರು. 9 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ನೀಡಲಾಯಿತು.

ಡಾ.ಡಿ.ವೀರೇಂದ್ರ ಹೆಗ್ಗಡೆ ಮಾತನಾಡಿ, ಜಾಗತಿಕ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಕರಗತ ಮಾಡಿಕೊಳ್ಳಬೇಕು. ಎಲ್ಲ ಮೂಲಭೂತ ಪರಿಕಲ್ಪನೆಗಳಿಗೆ ಒಡ್ಡಿಕೊಳ್ಳಬೇಕು. ತಮ್ಮ ಆಸಕ್ತಿದಾಯ ವಿಷಯಗಳಿಗೆ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಭಾರತೀಯ ನೀತಿ, ಸಾಮಾಜಿಕ ಜವಾಬ್ದಾರಿ ಮತ್ತು ಮೌಲ್ಯಗಳ ತಿಳಿವಳಿಕೆಗೆ ಪ್ರಾಮುಖ್ಯತೆ ನೀಡಬೇಕು. ಭಾರತೀಯರಲ್ಲಿ ನಿಜವಾದ ಮೌಲ್ಯ ಮತ್ತು ನೀತಿಯನ್ನು ದೃಢವಾಗಿ ವಶಪಡಿಸಿಕೊಂಡಿರುವ ಜಾಗತಿಕ ನಾಯಕರನ್ನು ಮಂಥನ ಮಾಡುವುದು ನಮ್ಮ ಗುರಿಯಾಗಿದೆ ಎಂದು ಹೇಳಿದರು. ಕಾಮನ್ ವೆಲ್ತ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ (ಇಂಡಿಯಾ)ಆಡಳಿತದ ನಿರ್ದೇಶಕರಾದ ಪಂಕಜಮ್ ಶ್ರೀದೇವಿ ಮಾತನಾಡಿದರು. ಕಾಲೇಜಿನ ಆಡಳಿತಾಧಿಕಾರಿ ಡಾ.ಎಂ.ವಿ ಸುನೀಲ್, ಸಂಸ್ಥೆಯ ನಿರ್ದೇಶಕರಾದ ಡಾ.ಎನ್.ಆರ್. ಪ್ರಶುರಾಮನ್, ಕಮಲ್ ಬಾಲಿ, ವಿಜು ಪರಮೇಶ್ವರ, ನಿಶಿತ್ ಜೈನ್, ಡಾ. ಭೀಮರಾಯ ಮೇತ್ರಿ, ಡಾ.ಇಂದಿರಾ, ಪವನ್ ಜಿ.ರಂಗ ಮತ್ತಿತರರು ಹಾಜರಿದ್ದರು.